ಇ) ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳನ್ನು ಇಲಾಖೆಯ ವಿಚಕ್ಷಣಾ ದಳವು ಪರಿಶೀಲಿಸಿ ನೀಡಿರುವ ವರದಿಯನ್ನು ಆಧರಿಸಿ ಬಿಲ್ಲು ಪಾವತಿಯನ್ನು ತಡೆಹಿಡಿದಿದ್ದು, ಪರಿಶೀಲಿಸಿ ಆದ್ಯತೆ ಮೇಲೆ ಸಂದಾಯ ಮಾಡಲಾಗುವುದು.

ಜಲಾನಯನ ಇಲಾಖೆಯ ಅವಶ್ಯಕತೆಯ ಬಗ್ಗೆ

4230 (4845) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲಾನಯನ ಇಲಾಖೆಯ ಅವಶ್ಯಕತೆ ಇದೆಯೆಂದು ಸರ್ಕಾರ ಭಾವಿಸಿದೆಯೆ?

ಆ) ಹಾಗಾದರೆ ಈ ಇಲಾಖೆ ಕಳೆದ 2 ವರ್ಷಗಳಲ್ಲಿ ಯಾವ ಯಾವ ಉದ್ದೇಶಗಳಿಗೆ ಎಷ್ಟು ಹಣ ನೀಡಲಾಗಿದೆ (ವರ್ಷವಾರು ವಿವರ ನೀಡುವುದು)

ಇ) ತಾಲ್ಲೂಕು ಮಟ್ಟದಲ್ಲಿ ಜಲಾನಯನ ಇಲಾಖೆಗೆ ಎಷ್ಟು ಅಧಿಕಾರಿಗಳನ್ನು ಮತ್ತು ನೌಕರರನ್ನು ಒದಗಿಸಲಾಗಿದೆ. (ವೃಂದವಾರು ವಿವರ ನೀಡುವುದು) ತಾಲ್ಲೂಕು ಮಟ್ಟದ ಇಲಾಖೆಯ ಮುಖ್ಯಸ್ಥರು ಯಾರು? ಅಧಿಕಾರಿ ಮತ್ತು ನೌಕರರ ಕೆಲಸ ಕಾರ್ಯಗಳೇನು? ಅವರ ಕೇಂದ್ರಸ್ಥಾನ ಯಾವುದು? ನೌಕರರಿಗೆ ಸಾಕಷ್ಟು ಕೆಲಸಗಳಿವೆಯೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು.

ಆ) ಕಳೆದೆರಡು ವರ್ಷಗಳ ಅವಧಿಯಲ್ಲಿ ನೀಡಲಾಗಿರುವ ಹಣದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಜಲಾನಯನ ಇಲಾಖೆಗೆ ತಾಲ್ಲೂಕು ಮಟ್ಟದಲ್ಲಿ ಒಟ್ಟು 13 ಸಿಬ್ಬಂದಿಯನ್ನು ಒದಗಿಸಲಾಗಿದ್ದು ಇದರ ವೃಂದವಾರು ವಿವರಗಳು ಹೀಗಿವೆ.

	ವೃಂದ	ಹುದ್ದೆಗಳ ಸಂಖ್ಯೆ
1.	ಕೃಷಿ ಅಧಿಕಾರಿ	1
2.	ಸಹಾಯಕ ಕೃಷಿ ಅಧಿಕಾರಿ	1
3.	ಕೃಷಿ ಸಹಾಯಕರು	6
4.	ತೋಟಗಾರರು	1
5.	ಅರಣ್ಯ ರಕ್ಷಕರು	3
6.	ಅರಣ್ಯ ಪಾಲಕರು	1
	ಒಟ್ಟು	13

ಇವರುಗಳು ಜಿಲ್ಲೆಯ ಉಪ ವಿಭಾಗೀಯ ಮಟ್ಟದ ಘಟಕ ಮುಖ್ಯಸ್ಥರುಗಳಾದ ಸಹಾಯಕ ಕೃಷಿ ನಿರ್ದೇಶಕರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸಹಾಯಕ ತೋಟಗಾರಿಕಾ ನಿರ್ದೇಶಕರು ಇವರ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಇವರುಗಳು ಕೃಷಿ ಅಧಿಕಾರಿಗಳ ನೇತೃತ್ವದ ತಂಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರುಗಳು

ಜಲಾನಯನ ಅಭಿವೃದ್ಧಿ ಇಲಾಖೆಯ ಆಯಾ ಘಟಕಗಳ ಕಾಮಗಾರಿಗಳ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಕೈಗೊಳ್ಳುತ್ತಿದ್ದಾರೆ. ಇವರುಗಳ ಕೇಂದ್ರಸ್ಥಾನ ತಾಲ್ಲೂಕು ಕೇಂದ್ರವಾಗಿರುತ್ತದೆ. ಇವರುಗಳಿಗೆ ಸಾಕಷ್ಟು ಕೆಲಸಗಳಿವೆ.

ನಮೂನೆ –1

2001-02 ಮತ್ತು 2002 ನೇ ಸಾಲಿಗೆ ಜಲಾನಯನ ಅಭಿವೃದ್ಧಿ ಇಲಾಖೆಗೆ ನೀಡಲಾದ ಹಣದ ವಿವರ

(ಹಣ ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಯೋಜನೆಯ ಹೆಸರು	2001–02ನೇ ಸಾಲಿಗೆ ನೀಡಲಾದ ಹಣ	2002–03ನೇ ಸಾಲಿಗೆ ನೀಡಲಾದ ಹಣ
	ಕೇಂದ್ರ ಪುರಸ್ಕೃತ ಯೋಜನೆ		
1.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	1917.43	891.01
2.	ನದಿ ಕಣಿವೆ ಯೋಜನೆ	970.718	1557.24
3.	ಉಪ್ಪು ಮತ್ತು ಕ್ಷಾರೀಯ ನೀರು ಆವೃತ ಪ್ರದೇಶಾಭಿವೃದ್ಧಿ	0.00	149.00
	ಕೇಂದ್ರ ಪುರಸ್ಕೃತ ಯೋಜನೆಯ ಒಟ್ಟು	2888.15	2597.25
	ರಾಜ್ಯ ವಲಯ		
4.	ಜಲಾನಯನ ಅಭಿವೃದ್ಧಿ ಇಲಾಖೆ ಸಿಬ್ಬಂದಿ		
	ಅ) ಯೋಜನೆ	966.81	94.00
	ಆ) ಯೋಜನೇತರ	53.21	57.74
5.	ಜಲಾನಯನ ತರಬೇತಿ ಕೇಂದ್ರ		
	ಅ) ಯೋಜನೆ	0.00	4.00
	ಆ) ಯೋಜನೇತರ	46.88	55.65
	ರಾಜ್ಯ ವಲಯ ಒಟ್ಟು	1066.90	211.39
	ಹೊರ ನೆರವಿನ ಯೋಜನೆ		
6.	ಸುಜಲ ಜಲಾನಯನ ಯೋಜನೆ	129.88	882.40
7.	ನಬಾರ್ಡ್	0.00	101.54
8.	ಕಕವಾಡ	500.0	500.00
	ಹೊರ ನೆರವಿನ ಯೋಜನೆಯ ಒಟ್ಟು	629.88	1483.94
	ಒಟ್ಟು ಮೊತ್ತ	4584.93	4292.58

ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ

4231 (4229) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?